# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶೆಟ್ಟಿಹಳ್ಳಿ ಉಪವಿಭಾಗ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಹತ್ತಿರ, ರವೀಂದ್ರನಗರ, ಶೆಟ್ಟಿಹಳ್ಳಿ ಕ್ರಾಸ್,

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ವಾರ್ಡ್ ಸಂಖ್ಯೆ 12 ರಲ್ಲಿ ದಿನಾಂಕ:- 20.09.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ ರವಿಕುಮಾರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಕೃಷ್ಣಮೂರ್ತಿ ಎಸ್.ಎನ್, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು.
3. ಶ್ರೀಮತಿ ನಾಗವೇಣಿ, ಸದಸ್ಯರು, ವಾರ್ಡ್ ನಂ.12.
4. ಶ್ರೀ ಮಂಜುನಾಥ್‌ಗೌಡ, ಪಶುಪಾಲನಾ ಇಲಾಖೆ, ವಾರ್ಡ್ ನಂ.12.
5. ಶ್ರೀ ಚಂದ್ರಮೋಹನ್, ವಾಟರ್‌ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ.
6. ಶ್ರೀ ಸುರೇಶ್, ಕಿ.ಆ.ಪ, ವಾರ್ಡ್ ನಂ.12.
7. ಶ್ರೀ ಜೆ. ಸಾಗರ್, ಅಸೆಸ್ಸರ್, ವಾರ್ಡ್ ನಂ.12.
8. ಶ್ರೀ ಸಂಜೀವಪ್ಪ, ಅರಣ್ಯ ಇಲಾಖೆ, ದಾಸರಹಳ್ಳಿ ವಲಯ.
9. ಶ್ರೀ ಗಣೇಶ್ ಟಿ, ಬಿಬಿಎಂಪಿ ಮಾರ್ಷಲ್.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**1) ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.**

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ಚಿಕ್ಕಸಂದ್ರ ಗ್ರಾಮದ ಸರ್ವೆ ನಂ.2/1ಬಿ ನಲ್ಲಿ ಶ್ರೀ ಭೈರಲಿಂಗಪ್ಪ ಎಂಬುವವರ ನಾಮಫಲಕವನ್ನು ಹಾಕಿರುವುದನ್ನು ತೆಗೆದು ಹಾಕಿ ಶ್ರೀ ಹೆಚ್. ಹನುಮಂತಯ್ಯ ಎಂಬುವವರ ಹೆಸರಿನ ನಾಮಫಲಕವನ್ನು ಹಾಕಿಸುವ ಬಗ್ಗೆ. | ಚಿಕ್ಕಸಂದ್ರದ ಗ್ರಾಮ ನಿವಾಸಿಗಳು ಮತ್ತು ವಾರ್ಡ್ ಸಮಿತಿ ಸದಸ್ಯರುಗಳು | ಶ್ರೀ ಹೆಚ್. ಹನುಮಂತಯ್ಯ ಎಂಬುವವರು ತಮ್ಮ ಹೆಸರಿನಲ್ಲಿದ್ದ ಜಮೀನನ್ನು ಈ ಹಿಂದೆಯೇ ಮಾರಿಕೊಂಡು ಈಗ ತಿಳಿಸಿರುವ ಸರ್ವೆ ನಂ.2/1 ಬಿ ನಲ್ಲಿ ವಾಸವಿಲ್ಲದಿರುವುದರಿಂದ ಇವರ ಹೆಸರಿನ ನಾಮಫಲಕವನ್ನು ಯಾವುದೇ ಕಾರಣಕ್ಕೂ ಹಾಕಬಾರದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |

Scanned by CamScanner

| | | | | |
|---|---|---|---|---|
| 2 | ಕಮ್ಮಗೊಂಡನಹಳ್ಳಿಯಲ್ಲಿ ಇರುವ ಅಶೋಕ ಪಾಲಿಟೆಕ್ನಿಕ್ ಹಿಂದೆ ಇರುವ ಸ್ಮಶಾಣದಲ್ಲಿ ಮುಸ್ಲಿಂರನ್ನು ಹೊರತಾಗಿ ಎಲ್ಲಾ ಜಾತಿಯ ಮತ್ತು ಬೇರೆ ಅಕ್ಕಪಕ್ಕದ ಪ್ರದೇಶದವರು ಸಹ ಇದೇ ಸ್ಮಶಾಣದಲ್ಲಿ ಹೆಣಗಳನ್ನು ಊಣುತ್ತಿದ್ದು, ಸದರಿ ಕೆ.ಜಿ. ಹಳ್ಳಿ ನಿವಾಸಿಗಳಿಗೆ ಸತ್ತವರಿಗೆ ಊಣಲು ಸ್ಥಳಾವಕಾಶ ಇಲ್ಲದಿರುವ ಬಗ್ಗೆ | ಶ್ರೀ ಸ್ಯಾಮುಯಲ್ | ಇದರ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ಎಂ.ಓ.ಹೆಚ್ ರವರಿಗೆ ಪತ್ರ ಬರೆಯುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 3 | ಅಬ್ಬಿಗೆರೆ ಸರ್ಕಾರಿ ಆಸ್ಪತ್ರೆಯ ಹಿರಿಯ ವೈದ್ಯರು ಸಾರ್ವಜನಿಕರಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲವೆಂದು ದೂರು ನೀಡಿದರು. | ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು | ಇದರ ಬಗ್ಗೆ ವಾರ್ಡ್ ಸಮಿತಿ ಅಧ್ಯಕ್ಷರು ಚರ್ಚಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 4 | ಮೇದರಹಳ್ಳಿ ಆರ್.ಆರ್. ಕಾಲೇಜ್ ಅಕ್ಕಪಕ್ಕದ ರಸ್ತೆಗಳು ನೀರಿನ ಪೈಪ್ ಅಳವಡಿಸಿರುವುದರಿಂದ ರಸ್ತೆಗಳು ಹಾಳಾಗಿರುವುದರ ಬಗ್ಗೆ. | ಶ್ರೀ ಸೋಮಶೇಖರ್ | ಶ್ರೀ ಕುಮಾರನ್ (ಎಲ್&ಟಿ) ರವರೊಂದಿಗೆ ತಿಳಿಸಿ ಸರಿಪಡಿಸಲು ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 5 | ಅಬ್ಬಿಗೆರೆ ವೃತ್ತದಲ್ಲಿ ಪೈಪ್‌ಲೈನ್ ಅಳವಡಿಸುವಾಗ ನೀರಿನ ಪೈಪ್ ಹೊಡೆದು ಹಾಕಿರುವುದಾಗಿ ದೂರು ನೀಡಲಾಯಿತು. | ಶ್ರೀ ಆಯೂಬ್ ಖಾನ್ | ಶ್ರೀ ಕುಮಾರನ್ ರವರು ಈ ದಿನವೇ ಸರಿಪಡಿಸಿ ಕೊಡುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 6 | ಕಲಾ ನಗರ ರಸ್ತೆಯ 3 ಮತ್ತು 4ನೇ ಅಡ್ಡರಸ್ತೆಯಲ್ಲಿ ನೀರು ಸರಿಯಾಗಿ ಸರಬರಾಜು ಆಗುತ್ತಿಲ್ಲವೆಂದು ದೂರು ನೀಡಿದರು. | ಶ್ರೀ ಸ್ಯಾಮುಯಲ್ | ಶ್ರೀ ಚಂದ್ರ ಮೋಹನ್ ರವರು ಸರಿಪಡಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪವಿಭಾಗ |
| 7 | ಮೇದರಹಳ್ಳಿಯಲ್ಲಿ ನೀರಿನ ಪೈಪ್‌ಗಳು ಲೀಕೇಜ್ ಆಗುತ್ತಿರುವುದನ್ನು ಸರಿಪಡಿಸಿಕೊಡಬೇಕೆಂದು ಕೋರಿದರು. | ಶ್ರೀ ಸೋಮಶೇಖರ್ | ಶ್ರೀ ಚಂದ್ರ ಮೋಹನ್ ರವರು ಸರಿಪಡಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪವಿಭಾಗ |
| 8 | ಶೆಟ್ಟಿಹಳ್ಳಿ ಅಂಗನವಾಡಿಗೆ ಪೋಲೀಸ್ ಬೀಟ್ ನ್ನು ಹಾಕಿಸಿಕೊಡಬೇಕೆಂದು ಕೇಳಿದರು. | ಶ್ರೀಮತಿ ನಾಗವೇಣಿ | ಈ ಬಗ್ಗೆ ಸಂಬಂಧಪಟ್ಟ ಠಾಣೆ ಅಧಿಕಾರಿಗಳಿಗೆ ತಿಳಿಸುವುದಾಗಿ ಹೇಳಲಾಯಿತು. | ಪೋಲೀಸ್ ಇನ್ಸ್‌ಪೆಕ್ಟರ್ ಗಂಗಮ್ಮನಗುಡಿ ಪೋಲೀಸ್ ಠಾಣೆ |
| 9 | ರಸ್ತೆಗಳಲ್ಲಿ ಅಳವಡಿಸಿರುವ ಸಿಸಿಟಿವಿಗಳಿಗೆ ಮರದ ರೆಂಬೆಗಳು ಅಡ್ಡ ಬರುತ್ತಿರುವುದನ್ನು ತೆಗೆದು ಹಾಕಿಸಬೇಕೆಂದು ಕೋರಿದರು. | ಶ್ರೀಮತಿ ನಾಗವೇಣಿ | ಇದರ ವಿಷಯವಾಗಿ ಅರಣ್ಯ ಇಲಾಖೆ ಸಿಬ್ಬಂದಿಯವರಿಗೆ ಸ್ಥಳದಲ್ಲಿಯೇ ತಿಳಿಸಿ ತೆರವುಗೊಳಿಸಲು ಹೇಳಲಾಯಿತು. | ಅರಣ್ಯ ಅಧಿಕಾರಿಗಳು ಅರಣ್ಯ ವಿಭಾಗ ದಾಸರಹಳ್ಳಿ ವಲಯ |

Scanned by CamScanner

| | | | | |
|---|---|---|---|---|
| 10 | ಬಿಬಿಎಂಪಿಯ 2021-22 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾದ ಅನುದಾನ ಮತ್ತು 15ನೇ ಹಣಕಾಸು ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದ ಬಗ್ಗೆ ಸಭೆಯಲ್ಲಿ ಈ ಕಾಮಗಾರಿಗಳಿಗೆ ಅನುಮೋದನೆಯನ್ನು ಪಡೆಯಲು ಮಂಡಿಸಲಾಯಿತು. | ಶ್ರೀ ಕೃಷ್ಣಮೂರ್ತಿ | ಈ ಕಾಮಗಾರಿಗಳಿಗೆ ವಾರ್ಡ್ ಸಮಿತಿ ಸದಸ್ಯರುಗಳ ಅನುಮೋದನೆಯನ್ನು ಪಡೆಯಲಾಯಿತು. (ಕಾಮಗಾರಿಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ). | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |

**ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ.**

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ಮನೆ ಮನೆಗಳಿಂದ ಹಾಗೂ ವಾಣಿಜ್ಯ ಸಂಕೀರ್ಣಗಳಿಂದ ಹಸಿಕಸ, ಒಣಕಸ ಮತ್ತು ಸ್ಯಾನಿಟರಿ ತ್ಯಾಜ್ಯಗಳನ್ನು ಬೇರ್ಪಡಿಸಿ ತೆಗದುಕೊಳ್ಳುವುದನ್ನು ಪರಿಶೀಲಿಸುವುದು.
2. ತ್ಯಾಜ್ಯ ವಿಂಗಡಿಸದೆ ನೀಡುವುದು ಕಂಡು ಬಂದರೆ ಅಂತಹವರಿಗೆ ದಂಡ ವಿಧಿಸಲು ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡುವುದು.

**2) ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.**

1. ಸುಮಾರು 1031 ರಸ್ತೆಗಳಿದ್ದು, ಇದರಲ್ಲಿ ಸುಮಾರು 820 ರಸ್ತೆಗಳನ್ನು ಬಿಡಬ್ಲ್ಯೂಎಸ್ಎಸ್‌ಬಿ ವತಿಯಿಂದ ಅಗೆಯಲಾಗಿದ್ದು, ಬಾಕಿ ಇರುವ 211 ರಸ್ತೆಗಳಲ್ಲಿ ಪಾಟ್‌ಹೋಲ್‌ಗಳನ್ನು ಮುಚ್ಚಲು ಅನುವು ಮಾಡಿಕೊಳ್ಳಲಾಗಿರುತ್ತದೆ.
2. ಸದರಿ ವಾರ್ಡ್‌ನ ಮುಖ್ಯರಸ್ತೆಗಳನ್ನು ತುರ್ತಾಗಿ ಸಾರ್ವಜನಿಕರು ಸುಗಮವಾಗಿ ಸಂಚಾರಿಸುವಂತೆ ಕ್ರಮವಹಿಸಲು ವಾರ್ಡ್‌ನ ಎಲ್ಲಾ ಅನುದಾನಗಳನ್ನು ಉಪಯೋಗಿಸಿಕೊಂಡು ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

**3) ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.**

1. ಸದರಿ ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಕುಡಿಯುವ ನೀರು ಕಾಮಗಾರಿಯು ಪೂರ್ಣವಾಗಿ ಮುಗಿದಿದ್ದು, ವಾರ್ಡ್‌ನ ಕೆಲವು ಭಾಗಗಳಲ್ಲಿ ಮನೆಗಳ ಸಂಪರ್ಕ ಬಾಕಿ ಇರುತ್ತದೆ.
2. ಸದರಿ ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಒಳಚರಂಡಿ ಕಾಮಗಾರಿಯು ಸುಮಾರು 85% ಮುಗಿದಿದ್ದು, ವಾರ್ಡ್‌ನ ಕೆಲವು ಭಾಗಗಳಲ್ಲಿ ಒಳಚರಂಡಿಯ ಮುಖ್ಯ ಪೈಪ್‌ಲೈನ್‌ಗಳನ್ನು ಹಾಕಬೇಕಾಗಿದ್ದು, ಇನ್ನೂ ಬಾಕಿ ಇರುವ ಮ್ಯಾನ್‌ಹೋಲ್‌ಗಳನ್ನು ಅಳವಡಿಸಬೇಕಾಗಿರುತ್ತದೆ

Scanned by CamScanner

ಹಾಗೂ ರಿಸಿವಿಂಗ್ ಚೇಂಬರ್‌ಗಳನ್ನು ಅಳವಡಿಸಿ ಮನೆಗಳಿಗೆ ಸಂಪರ್ಕ ನೀಡುವುದು ಬಾಕಿ ಇರುತ್ತದೆ.

**4) ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ದಿನಾಂಕ: 20.09.2021 ರಂದು ಚರ್ಚಿಸಿರುವ ವಿಚಾರಗಳು.**

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ಟ್ರಾಫಿಕ್ ಪೋಲೀಸ್ ರವರಿಗೆ ರೈಲ್ವೇ ಕ್ರಾಸ್ ಬಳಿ ಬೀಟ್ ಪೋಲೀಸ್ ಹಾಕಿಸಿಕೊಡಬೇಕೆಂದು ಕೋರಲಾಯಿತು. | ನಾಗವೇಣಿ | ಟ್ರಾಫಿಕ್ ಪೋಲೀಸ್ ರವರಿಗೆ ತಿಳಿಸಲಾಯಿತು. | ಟ್ರಾಫಿಕ್ ಪೋಲೀಸ್ ಜಾಲಹಳ್ಳಿ ಪೋಲೀಸ್ ಠಾಣೆ |
| 2 | ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ರಸ್ತೆ ಅಗೆದಿರುವುದನ್ನು ಮಣ್ಣು ತುಂಬಿಸಿ ಮುಂದಿನ ಕೆಲಸ ಮಾಡಬೇಕೆಂದು ಟ್ರಾಫಿಕ್‌ರವರು ಎಚ್ಚರಿಕೆ ನೀಡಿರುತ್ತಾರೆ. | ಸಾರ್ವಜನಿಕರು | ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 3 | ಅಬ್ಬಿಗೆರೆ ಮುಖ್ಯರಸ್ತೆ ಅಗೆದಿರುವುದರಿಂದ ಪರ್ಯಾಯ ರಸ್ತೆ ಮಾಡಿಸಬೇಕೆಂದು ಹಾಗೂ ಹಸುಗಳು ಅಡ್ಡಾದಿಡ್ಡಿ ಓಡಾಡುತ್ತಿರುವುದಾಗಿ ತಿಳಿಸಿದರು | ನಾಗವೇಣಿ | ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ. | ಅರಣ್ಯಾಧಿಕಾರಿಗಳು ಅರಣ್ಯ ವಿಭಾಗ |
| 4 | ಚಿಕ್ಕಸಂದ್ರ ಸರ್ಕಾರಿ ಶಾಲೆ ಎದುರು 4ನೇ ಅಡ್ಡರಸ್ತೆ, ಕುವೆಂಪು ರಸ್ತೆ 5ನೇ ಅಡ್ಡರಸ್ತೆ ಮತ್ತು ಇಂದಿರಾ ಕ್ಯಾಂಟೀನ್ ರಸ್ತೆಯಲ್ಲಿ ಬೀದಿ ದೀಪಗಳು ಉರಿಯುತ್ತಿಲ್ಲವೆಂದು ತಿಳಿಸಲಾಯಿತು. | ದಯಾಳ್ & ಚಂದ್ರು | ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ |
| 5 | ಶಂಕರ್ ಎಂಬುವವರ ಮನೆಗೆ ಹೋಗುವ ರಸ್ತೆಯಲ್ಲಿ ಅದೇ ರಸ್ತೆಯಲ್ಲಿ ವಾಸವಾಗಿರುವ ಮತ್ತೊಬ್ಬರ ಮನೆಯ ಮುಂದೆ ಸಣ್ಣದಾಗಿ ವಾಹನ ಒಳಗೆ ತೆಗೆದುಕೊಳ್ಳಲು ರ್‍ಯಾಂಪ್ ಮಾಡಿಸಿರುವುದನ್ನು ತೆಗೆಸಿಕೊಡಬೇಕೆಂದು ಕೋರಿರುತ್ತಾರೆ. | ಶಂಕರ್ | ಈ ವಿಷಯವಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ ರವರಿಗೆ ಮನವಿ ಸಲ್ಲಿಸಲು ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ |
| 6 | ಗೇಟ್‌ಪಾಳ್ಯದಲ್ಲಿರುವ ರಾಜಕಾಲುವೆಯನ್ನು ಸರಿಪಡಿಸಬೇಕೆಂದು ಕೋರಲಾಯಿತು. | ಪ್ರದೀಪ್ ಕುಮಾರ್ | ಈ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ |
| 7 | ಕೆ.ಜಿ.ಯ ಹಳ್ಳಿಯ ಸ್ಮಶಾಣದ ಒಳಗೆ ನೀರಿನ ವ್ಯವಸ್ಥೆ ಮತ್ತು ವಿದ್ಯುಚ್ಛಕ್ತಿ ಇಲ್ಲದಿರುವುದಾಗಿ ಮನವಿ ಮಾಡಲಾಯಿತು. | ದಯಾಳ್ | ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ವ್ಯವಸ್ಥೆ ಕಲ್ಪಿಸುವುದಾಗಿ ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ |
| 8 | ಕೆ.ಜಿ. ಹಳ್ಳಿ ಆಟೋ ಸ್ಟಾಂಡ್ ದರ್ಶನ್ ಬಾರ್ ಬಳಿ ಇರುವ ಇ-ಟಾಯ್ಲೆಟ್ ಅನ್ನು ತೆರವುಗೊಳಿಸುವ ಬಗ್ಗೆ | ದಯಾಳ್ | ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ |

Scanned by CamScanner

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

Sd/-

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 12 ಶೆಟ್ಟಿಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Sd/-

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ. 12 ಶೆಟ್ಟಿಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

:ಪ್ರತಿಯನ್ನು:

**ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.**

1) ಶ್ರೀ ರವಿಕುಮಾರ್, ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿಗಳು, ರವರ ಮಾಹಿತಿಗಾಗಿ ಕಳುಹಿಸಿದೆ.
2) ಶ್ರೀ ಕೆ.ಸಿ. ವೆಂಕಟೇಶ್ (ದೇವೇಗೌಡ್ರು), ಕೆ.ಜಿ.ಹಳ್ಳಿ, ರವರ ಮಾಹಿತಿಗಾಗಿ ಕಳುಹಿಸಿದೆ
3) ಶ್ರೀ ರಾಮಕೃಷ್ಣೇಗೌಡ್ರು , ಎ.ಜಿ.ಬಿ. ಬಡವಾಣೆ, ರವರ ಮಾಹಿತಿಗಾಗಿ ಕಳುಹಿಸಿದೆ
4) ಶ್ರೀ ಕೃಷ್ಣಪ್ಪ, ಅಬ್ಬಿಗೆರೆ, ರವರ ಮಾಹಿತಿಗಾಗಿ ಕಳುಹಿಸಿದೆ
5) ಶ್ರೀ ಕೆಂಪೋಬಳಯ್ಯ, ಶೆಟ್ಟಿಹಳ್ಳಿ, ರವರ ಮಾಹಿತಿಗಾಗಿ ಕಳುಹಿಸಿದೆ
6) ಶ್ರೀಮತಿ ಲಲಿತಮ್ಮ, ಬಾಬಣ್ಣ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ
7) ಶ್ರೀ ರಾಜಣ್ಣ (ಗ್ಯಾಸ್), ಚಿಕ್ಕಸಂದ್ರ, ರವರ ಮಾಹಿತಿಗಾಗಿ ಕಳುಹಿಸಿದೆ
8) ಶ್ರೀಮತಿ ನಾಗವೇಣಿ, ವಿನಾಯಕ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ

**ಅಧಿಕಾರಿಗಳ ಮಾಹಿತಿಗಾಗಿ**

1) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆಟ್ಟಿಹಳ್ಳಿ)ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಶೆಟ್ಟಿಹಳ್ಳಿ)ರವರ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರ ಮಾಹಿತಿಗಾಗಿ ಕಳುಹಿಸಿದೆ
8) ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) ರವರ ಮಾಹಿತಿಗಾಗಿ ಕಳುಹಿಸಿದೆ
9) ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB)ರವರ ಮಾಹಿತಿಗಾಗಿ ಕಳುಹಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಕಳುಹಿಸಿದೆ
11) ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ
12) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ/ಕೆಪಿಟಿಸಿಎಲ್ ಸೋಲದೇವನಹಳ್ಳಿ/ಜಾಲಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ

Scanned by CamScanner

13) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಎನ್-5 ಪೀಣ್ಯ ರವರ ಮಾಹಿತಿಗಾಗಿ ಕಳುಹಿಸಿದೆ
14) ಉಪ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ರವರ ಮಾಹಿತಿಗಾಗಿ ಕಳುಹಿಸಿದೆ.
15) ವಲಯ ಅರಣ್ಯಾಧಿಕಾರಿ ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ
16) ಸಹಾಯಕ ನಿರ್ದೇಶಕರು (ನಗರ ಯೋಜನೆ) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ
17) ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ
18) ಸಹಾಯಕ ನಿರ್ದೇಶಕರು (ಪಶುಪಾಲನೆ) ರವರ ಮಾಹಿತಿಗಾಗಿ ಕಳುಹಿಸಿದೆ
19) ಕಲ್ಯಾಣಾಧಿಕಾರಿ (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಕಳುಹಿಸಿದೆ
20) ತೋಟಗಾರಿಕೆ ಅಧೀಕ್ಷಕರು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಕಳುಹಿಸಿದೆ
21) ಆರೋಗ್ಯಾಧಿಕಾರಿ/ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.12 ರವರ ಮಾಹಿತಿಗಾಗಿ ಕಳುಹಿಸಿದೆ
22) ಪೋಲೀಸ್ ಇನ್ಸ್‌ಪೆಕ್ಟರ್ ಗಂಗಮ್ಮನಗುಡಿ/ಬಾಗಲಗುಂಟೆ/ಸೋಲದೇವನಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ
23) ಪೋಲೀಸ್ ಸಬ್ ಇನ್ಸ್‌ಪೆಕ್ಟರ್ (ಸಂಚಾರಿ) ಜಾಲಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ
24) ಕಛೇರಿ ಪ್ರತಿ.

Scanned by CamScanner